ಮಾಡಬೇಕು. ಸಂಬಂಧಪಟ್ಟ ಸಚಿವರು ಇದ್ದರೆ ಉತ್ತರ ಹೇಳುತ್ತಾರೆ. ಯುವಕರು ಇದನ್ನು ದಯವಿಟ್ಟು ಗಮನಿಸಿ. ಆಯಿತು ಈಗ ಶೂನ್ಯ ವೇಳೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

1. ವಿಷಯ: ದಿನಗೂಲಿ ನೌಕರರ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಶೂನ್ಯ ವೇಳೆಯಲ್ಲಿ ದಿನಗೂಲಿ ನೌಕರರ ಬಗ್ಗೆ ಕೇಳಿದ್ದೆ. ಅದಕ್ಕೆ ಅವರಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೆ, ಕಡತ ತೆಗೆದು ನೋಡಿ. ಉತ್ತರ ಇದ್ದರೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ಜಗದೀಶ್‌ಶೆಟ್ಟರ್‌ರವರೆ ತಮ್ಮ ಪ್ರಶ್ನೆ ಕೇಳುವುದು.

2. ವಿಷಯ: ನೈಸ್‌ಗೆ ಸಂಬಂಧಿಸಿದಂತೆ ಪತ್ರಿಕೆಯಲ್ಲಿ ಬಂದಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, "ನಿನ್ನೆ ಕನ್ನಡ ಪ್ರಭ" ದಿನಪತ್ರಿಕೆಯಲ್ಲಿ ಸುದ್ದಿ ಬಂದಿದೆ ಏನೆಂದರೆ 'ನೈಸಾಗಿ ಬೆಂಕಿ ಬಿತ್ತು, ಅಧಿಕಾರಿಗಳಿಂದ ಅಕ್ರಮ ದಾಖಲೆ ನಾಶ' ಎಂದು. ಈ ನೈಸ್ ಬಗ್ಗೆ...

ಅಧ್ಯಕ್ಷರು:– ಅವೆಲ್ಲಾ ಬೇಡ.

ಶ್ರೀ ಜಗದೀಶ್ ಶೆಟ್ಟರ್:– ನೈಸ್ ಬಗ್ಗೆ ಸಮಗ್ರ ತನಿಖೆಗಾಗಿ ಒಂದು ಸದನ ಸಮಿತಿಯನ್ನು ತಾವು ಮಾಡಿದ್ದೀರಿ.

ಅಧ್ಯಕ್ಷರು:– ಹೌದು.

ಶ್ರೀ ಜಗದೀಶ್ ಶೆಟ್ಟರ್:– ಆ ಸಮಿತಿಗೆ ಮಾನ್ಯ ಜಯಚಂದ್ರರವರೆ ಅಧ್ಯಕ್ಷರಿದ್ದಾರೆ. ಅದರ ಬಗ್ಗೆ ಪ್ರಶ್ನೆ ಇಲ್ಲ. ಅದರ ಬಗ್ಗೆ discussion ಆಗಲಿ, file ತರಿಸಲಿ, ಅದರ ಬಗ್ಗೆ ಏನು ನಿರ್ಣಯ ಕೊಡುತ್ತಾರೆ ಕೊಡಲಿ. ಆದರೆ